**O.S.No.**132/2021

**ಪಿ.ಡಬ್ಲೂ 1**

ದಿನಾಂಕಃ **22.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಶ್ರೀ. ಎಸ್.ಟಿ.ಎನ್, ವಕೀಲರಿಂದಃ

ನನಗೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ತಿಳಿದಿವೆ ದಾವಾ ಆಸ್ತಿ 3 ಎಕರೆ 37 ಗಂಟೆ ಇದೆ. ಲೇಟ್ ಕದರಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಅವರ ಹೆಸರುಗಳು ಗಂಗಪ್ಪ ಮತ್ತು ಕರಿಮರಿಯಪ್ಪ. ದಾವಾ ಆಸ್ತಿಯು ಸರ್ಕಾರದಿಂದ ನನ್ನ ತಾತ ಕದರಪ್ಪನವರ ಹೆಸರಿಗೆ ಮಂಜೂರಾದ ಆಸ್ತಿಯಾಗಿದೆ. ಸದರಿ ಮಂಜೂರಾತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಮಂಜೂರಾತಿಯು 1984 ನೇ ಇಸವಿಯಲ್ಲಿ ಮಾಡಲಾಗಿದೆ. ಸರ್ವೆ ನಂಃ163 ರ ಒಟ್ಟು ವಿಸ್ತೀರ್ಣ 31 ಎಕರೆ ಇದೆ. ಸದರಿ ಸರ್ವೆ ನಂಃ 163 ರ ಜಮೀನು ಒಟ್ಟು 8 ಜನಕ್ಕೆ ಮಂಜೂರಾಗಿದ್ದು, ನನ್ನ ತಾತನವರನ್ನು ಬಿಟ್ಟು ಉಳಿದವರ ಹೆಸರುಗಳು ನನಗೆ ಹೇಳಲು ಆಗುವುದಿಲ್ಲ.

ಕದರಪ್ಪನವರ ಇಬ್ಬರು ಗಂಡು ಮಕ್ಕಳ ಪೈಕಿ ನನ್ನ ವಾರಸುದಾರಿಕೆಯು ನನ್ನ ತಂದೆ ಗಂಗಪ್ಪನವರ ಮೂಲಕ ಬಂದಿದೆ. ನನ್ನ ತಂದೆ ಗಂಗಪ್ಪನವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದಾರೆ. ಸದರಿ 1984 ರ ಮಂಜೂರಾತಿಯು ಕದರಪ್ಪನವರಿಗೆ ಮಂಜೂರಾಗಿಲ್ಲ ಬದಲಿಗೆ ಕರಿಮರಿಯಪ್ಪನವರಿಗೆ ಆಗಿದ್ದು ಎಂದರೆ ಸರಿಯಲ್ಲ. ನನ್ನ ತಂದೆ ಗಂಗಪ್ಪ ಕದರಪ್ಪನವರ ಮಗ ಅಲ್ಲ ಎಂದರೆ ಸರಿಯಲ್ಲ. ದಿನಾಂಕಃ 8-12-1967 ರಂದು ದಾವಾ ಆಸ್ತಿಯ ಮಂಜೂರಾತಿಯು ಕರಿಮರಿಯಪ್ಪನವರ ಹೆಸರಿಗೆ ಆಗಿದೆಯೇ ಹೊರೆತು ಕದರಪ್ಪನವರ ಹೆಸರಿಗೆ ಆಗಿಲ್ಲ ಎಂದೆರ ಸರಿಯಲ್ಲ. ಕರಿಮರಿಯಪ್ಪನವರಿಗೆ 3 ಜನ ಮಕ್ಕಳು ಅವರ ಹೆಸರುಗಳು ನರಸಮ್ಮ, ಅಂಜನಮ್ಮ ಮತ್ತು ಮರುಗಮ್ಮ.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಸಮಯವಕಾಶವನ್ನು ಕೋರಿದ್ದು, ಆಲಿಸಿ ಮುಂದೂಡಲಾಯಿತು.

**O.S.No.**132/2021

**ಪಿ.ಡಬ್ಲೂ 1**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ